# ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಲಿಪಿಕ ನೌಕರರ,ವಾಹನ ಚಾಲಕರ ಮತ್ತು ಗ್ರೂಪ್ ಡಿ ನೌಕರರ ಸಂಘ(ರಿ)

ಸಂಖ್ಯೆ: ಸಿರಿಸುಇ12 ಪೇಸವಿ 2012 ದಿನಾಂಕ: 21-12-2012 ಪ್ರಕಾರ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ

ಆಯುಕ್ತರ ಕಛೇರಿ ಅವರಣ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು- 560001

ಕ್ರಮ ಸಂಖ್ಯೆ.

ದಿನಾಂಕ: 16/02/2025

## ಪ್ರಕಟಣೆ

ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆ ಲಿಪಿಕ ನೌಕರರ ವಾಹನ ಚಾಲಕರ ಮತ್ತು ಗ್ರೂಪ್-ಡಿ ನೌಕರರ ಸಂಘ(ರಿ) ದ ವತಿಯಿಂದ 2024-25ನೇ ಸಾಲಿನಿಂದ 2028-29 ನೇ ಸಾಲಿನವರೆಗೆ ಚುನಾವಣೆ ನಡೆಸಲು ಈಗಾಗಲೇ ಸಿದ್ಧಪಡಿಸಿರುವ ಕರಡು ಮತದಾರರ ಪಟ್ಟಿಯನ್ನು ಸಂಘದ ವೆಬ್‌ಸೈಟ್ ವಿಳಾಸ www.ksenta.inರಲ್ಲಿ ದಿನಾಂಕ. 23.01.2025 ರಂದು ಪ್ರಕಟಿಸಲಾಗಿದೆ. ಸದರಿ ಪಟ್ಟಿಯನ್ನು ಮತದಾರರು ಪರಿಶೀಲಿಸಿ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ತಾಲ್ಲೂಕು/ಜಿಲ್ಲಾ/ರಾಜ್ಯಪದಾಧಿಕಾರಿಗಳ ಹಂತದಲ್ಲಿ ದಿನಾಂಕ.06.02.2025 ರೊಳಗೆ ನೀಡಿ ಸರಿಪಡಿಸಿಕೊಳ್ಳಲು ತಮ್ಮಲ್ಲಿ ಕೋರಲಾಗಿತ್ತು.

ಸದಸ್ಯತ್ವ ಹೊಂದದ ನೌಕರರು ಸದಸ್ಯತ್ವ ಹೊಂದಲು ಇಚ್ಛಿಸಿದಲ್ಲಿ ಸಂಘದ ಬೈಲಾ ಪ್ರಕಾರ ಬಾಕಿ ಐದು ವರ್ಷದ ಸದಸ್ಯತ್ವ ಶುಲ್ಕ ರೂ.250/- (ಪ್ರತಿವರ್ಷಕ್ಕೆ ರೂ.50-00 ರಂತೆ) ಗಳನ್ನು ಪಾವತಿಸಿ ಸದಸ್ಯತ್ವವನ್ನು ಪಡೆಯಲು ಕರಡು ಪಟ್ಟಿ ಪ್ರಕಟಿಸಿದ 15 ದಿನಗಳೊಳಗೆ ಅವಕಾಶವನ್ನು ನೀಡಲಾಗಿತ್ತು. ಆದರೆ ತದನಂತರವೂ ಸದಸ್ಯತ್ವ ಶುಲ್ಕ ಪಾವತಿಸಲು ಅವಕಾಶ ನೀಡಲು ಕೋರಿ ರಾಜ್ಯಾದ್ಯಂತ ಬೋಧಕೇತರ ನೌಕರರು ಮನವಿ ಮಾಡಿರುತ್ತಾರೆ. ಸದರಿ ಬೇಡಿಕೆಯನ್ನು ಪರಿಶೀಲಿಸಿ, ಚುನಾವಣಾಧಿಕಾರಿಗಳೊಂದಿಗೆ ಸಮಾಲೋಚಿಸಿದಂತೆ ಹಾಗೂ ದಿನಾಂಕ: 12.02.2025 ರಂದು ಸಭೆ ನಡೆಸಿ ತೀರ್ಮಾನಿಸಿದಂತೆ ಅಂತಿಮ ಪಟ್ಟಿ ಪ್ರಕಟಿಸಿದ ನಂತರವೂ ಬೋಧಕೇತರ ನೌಕರರು ಇಚ್ಛಿಸಿದಲ್ಲಿ ನಿಗದಿತ ಶುಲ್ಕವನ್ನು ಸಂಘದ ಖಾತೆ ಸಂಖ್ಯೆ: **520101235161991** ( KARNATAKA RAJYA SARVAJANIKA SHIKSHANA ILAKHEYA LIPIKA NOWKARARA VAHANA CHALAKARA MATTU GROUP D NOWKARARA SANGHA (R) ಗೆ ನೇರವಾಗಿ ಪಾವತಿಸಿ ಸದಸ್ಯತ್ವ ನೊಂದಣಿ ಮಾಡಿಕೊಳ್ಳಲು ಅನುಮತಿಸಿದೆ. ನೋಂದಣಿ ಶುಲ್ಕ ಪಾವತಿಸಿದ ಮಾಹಿತಿಯನ್ನು ಈ ಕೆಳಕಂಡ ಸಹಾಯವಾಣಿ ಸಂಖ್ಯೆಗೆ ವಾಟ್ಸಾಪ್ ಮೂಲಕ ಒದಗಿಸಿದಲ್ಲಿ ಪರಿಶೀಲಿಸಿ, ಸಂಘದ ಖಾತೆಗೆ ಸದರಿ ಹಣ ಜಮೆ ಆಗಿರುವ ಬಗ್ಗೆ ಖಾತ್ರಿ ಪಡಿಸಿಕೊಂಡು ರಶೀದಿಯ ನಕಲನ್ನು ವಾಟ್ಸಾಪ್ ಮೂಲಕ ಕಳುಹಿಸಲಾಗುವುದು. ಮೂಲ ರಶೀದಿಯ ಪ್ರತಿಯನ್ನು ರಾಜ್ಯ ಸಂಘದ ಕಛೇರಿಯಿಂದ ಪಡೆದುಕೊಳ್ಳತಕ್ಕದ್ದು.

**ಸಹಾಯವಾಣಿ : 8971602363**

ಸಂಚಾಲಕರು/ಅಧ್ಯಕ್ಷರು

ಸಹಿ:-

| | | |
|---|---|---|
| 1. | ಶ್ರೀಮತಿ.ರಮಾ ಆರ್, ಅಧ್ಯಕ್ಷರು, ಕ.ರಾ.ಸ.ಮ.ನೌ. ಸಂಘ | |
| 2. | ಶ್ರೀಮತಿ.ಹರಿಣಾಕ್ಷಿ, ಮಾಜಿ ರಾಜ್ಯಾಧ್ಯಕ್ಷರು | |
| 3. | ಶ್ರೀ.ವೆಂಕಟೇಶ್‌ಮೂರ್ತಿ ವಿ.ಆರ್. ಮಾಜಿ ಪ್ರಧಾನ ಕಾರ್ಯದರ್ಶಿಗಳು | |
| 4. | ಶ್ರೀ.ವಿನಯ್‌ಪ್ರಸಾದ್,ಹೆಚ್.ಡಿ ದ್ವಿ.ದ.ಸ. | |